ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಯಲಬುರ್ಗಾ

**ಸಿ.ಸಿ. 584/2023**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಈರಪ್ಪ | ಪ್ರಾ ಸಾ : | 02 |
| ತಂದೆ/ಗಂಡನ ಹೆಸರು | : ಯಲ್ಲಪ್ಪ | ಚಾ ಸಾ : | 04 |
| ವಯಸ್ಸು | : 45 ವರ್ಷ | | |
| ವೃತ್ತಿ | ಃ ವ್ಯವಸಾಯ | | |
| ವಾಸಸ್ಥಳ | ಃ ಮಾಳೆಕೊಪ್ಪ | | |

ಸಾಕ್ಷಿಗೆ ದಿನಾಂಕಃ **28-02-2024** ರಂದು ಪ್ರಮಾಣ ವಚನ ನೀಡಲಾಯಿತು

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ

ಮೃತ ತೋಟಪ್ಪ ತಂದೆ ಶರಣಬಸಪ್ಪ ಹಾಗೂ ಗುರುಬಸವ್ವ ರವರ ಪರಿಚಯ ಇದೆ. ಚಾಸಾ-೧ ರವರು ಗೊತ್ತು. ಚಾಸಾ 2 ರಿಂದ 3 ಗೊತ್ತು.

ತೋಟಪ್ಪ ಹಾಗೂ ಗುರುಬಸಪ್ಪ ಹೇಗೆ ತೀರಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಅಪಘಾತ ಹೇಗೆ ಆಗಿರುತ್ತದೆ ಯಾರ ತಪ್ಪಿನಿಂದ ಆಗಿರುತ್ತದೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ನನ್ನ ತಲೆಗೆ ಪೆಟ್ಟಾಗಿರುತ್ತದೆ. ಗೂಡ್ಸ ವಾಹನದಲ್ಲಿ ಅಪಘಾತವಾಗಿರುತ್ತದೆ. ವಾಹನವನ್ನು ಯಾರು ಚಲಾಯಿಸುತ್ತಿದ್ದರು ಹಾಗೂ ಅದರ ಸಂಖ್ಯೆ ಗೊತ್ತಿಲ್ಲ. ಅಪಘಾತದ ನಂತರ ನಾನು ಕೂಕನೂರು ಹಾಗೂ ಕೊಪ್ಪಳದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಸಾಕ್ಷಿ ನ್ಯಾಯಾಲಯ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದರು , ನೀಡಲಾಯಿತು)

<u>ಪಾಟೀಸವಾಲುಃ ಸ.ಸ.ಅ ರವರಿಂದ</u>

ದಿನಾಂಕ 05-11-2018 ರಂದು ಬೆಳಿಗ್ಗೆ ನಾನು ಸಂತೆ ಮಾಡಲು ಕುಕನೂರಿಗೆ ಬಸ್ ನಲ್ಲಿ ಬಂದಿದ್ದೇನು ಎಂದರೆ ಸರಿ. ಮೃತ ತೋಟಪ್ಪ ಗುರುಬಸವ್ವ ಚಾಸಾ-1 ರಿಂದ 3 ರವರು ಬಂದಿದ್ದರು ಎಂದರೆ ಸರಿ. ನಂತರ 1 ನೇ ಆರೋಪಿ ರಾಜೇಸಾಬರವರ ಗೂಡ್ಸ ಆಟೋದಲ್ಲಿ ಊರಿಗೆ ಹೋಗುತ್ತಿದ್ದೇನು ಎಂದರೆ ಸರಿ. ಮನ್ನಾಪುರ ದಾಟಿದ ನಂತರ 1 ನೇ ಆರೋಪಿ ತನ್ನ ವಾಹನವನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಂಗನಹಳ್ಳಿ ದಾಟಿದ ನಂತರ ಬ್ರಿಡ್ಜ ಹತ್ತಿರ ಗೂಡ್ಸ ವಾಹನ ಪಲ್ಟಿಯಾಗಿರುತ್ತದೆ ಎಂದರೆ ಸರಿ. ವಾಹನ ಪಲ್ಟಿಯಾಗಿದ್ದರಿಂದ ತೋಟಪ್ಪ ಹಾಗೂ ಗುರುಬಸವ್ವ ರವರಿಗೆ ಭಾರಿಗಾಯವಾಗಿ ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಅಪಘಾತದಲ್ಲಿ ಚಾಸಾ-1 ರಿಂದ 3 ಹಾಗೂ ನನಗೆ ಪೆಟ್ಟಾಗಿರುತ್ತದೆ ಎಂದರೆ ಸರಿ. 1 ನೇ ಆರೋಪಿಗೂ ಅಪಘಾತದಲ್ಲಿ ರಕ್ತಗಾಯವಾಗಿರುತ್ತದೆ ಎಂದರೆ ಸರಿ. ನಂತರ ನಾನು ಆ್ಯಂಬುಲೇನ್ಸ ನಲ್ಲಿ ಕೂಕನೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಹೆಚ್ಚಿನ ಚಿಕಿತ್ಸೆಗಾಗಿ ಕೊಪ್ಪಳದ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿ. ಅಪಘಾತದ ನಂತರ ಚಾಸಾ-1 ರವರು ದೂರು ನೀಡಿರುತ್ತಾರೆ ಎಂದರೆ ಸರಿ. ಸದರಿ ವಾಹನಕ್ಕೆ ನೊಂದಾಣಿ ಸಂಖ್ಯೆ ಇರಲಲಿಲ್ಲ ಚೆಸ್ಸಿ ನಂಃ ಎಮ್ ಡಿ 2 ಎ 98 ಎ-ವಾಯ್ 4 ಜೆ ಡಬ್ಲ್ಯೂ ಸಿ-39639 ಆಗಿತ್ತು ಎಂದರೆ

ಸರಿ. 1 ನೇ ಆರೋಪಿ ತನ್ನ ವಾಹನವನ್ನು ಅತಿವೇಗವಾಗಿ ಚಲಾಯಿಸಿದ್ದರಿಂದ ವಾಹನ ಪಲ್ಟಿಯಾಗಿ ತೋಟಪ್ಪ ಹಾಗೂ ಗುರುಬಸವ್ವ ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಹೇಳಿಕೆಯನ್ನು ಓದಿ ಹೇಳಲಾಗಿ ಅಲ್ಲಗಳೆದಿದ್ದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ನಿಪಿ-1 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಇಟರ್ನಿಟಿ ಕುಕನೂರು.